**ಒಂದನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಹುಬ್ಬಳ್ಳಿ.**

FDP No.6-13 CW.2

ಸಾಕ್ಷಿದಾರನ ಹೆಸರು : ಕಾಶಪ್ಪ ಕೋಳಿ
ತಂದೆಯ ಹೆಸರು : ಮಾಗುಂಡಪ್ಪ
ವಯಸ್ಸು : 48 ವರ್ಷ
ಉದ್ಯೋಗ : ಸಿಟಿ ಸರ್ವೆಯರ್
ವಾಸ್ತವ್ಯ : ಹುಬ್ಬಳ್ಳಿ

ಸಾಕ್ಷಿಯನ್ನು ಈ ದಿನ ದಿನಾಂಕ 14.01.2020 ರಂದು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ :- ಶ್ರೀ ಎನ್ ಎಂ ಸಿ ವಕೀಲರಿಂದ ಪ್ರತಿವಾದಿಯರ ಪರವಾಗಿ:-**

.ನಾನು ಕಳೆದ 5 ವರ್ಷಗಳಿಂದ ಹುಬ್ಬಳ್ಳಿಯಲ್ಲಿ ನಗರ - ಭೂಮಾಪಕರು ಅಂತಾ ಸೇವೆ ಸಲ್ಲಿಸುತ್ತಿದ್ದೇನೆ. ಈ ಮೊದಲು ನಾನು ಅಳತೆ ಮಾಡಿ ಸಲ್ಲಿಸಿದಂತಹ ಕಮೀಶನ್ ವರದಿ ರದ್ದುಗೊಂಡಿರುತ್ತದೆ ಆ ಕಾರಣ ನ್ಯಾಯಾಲಯದ ಆದೇಶದಂತೆ ನಾನು ಪುನಃ ಈ ಪ್ರಕರಣದಲ್ಲಿ ಆಯುಕ್ತ ಅಂತಾ ನೇಮಕಗೊಂಡಿರುತ್ತೇನೆ.

..2.. ದಿಃ 19.10.2019 ರಂದು ಈ ಪ್ರಕರಣದ ವಾದಿ ಹಾಗೂ ಪ್ರತಿವಾದಿಗಳಿಗೆ ನಾನು ನೋಟಿಸನ್ನು ನೀಡಿರುತ್ತೇನೆ, ಅದರ ಪ್ರತಿಯನ್ನು ನಿಸಿ.5 ಎಂದು, 7 ಅಂಚೆ ರಶೀದಿಗಳನ್ನು ಒಟ್ಟಿಗೆ ನಿಸಿ-6 ಎಂದು ಗುರುತಿಸಲಾಯಿತು. ನೋಟಿಸನ್ನು ದಿಃ 30.10.2019 ರಂದುನೋಂದಾಯಿತ ತ್ವರಿತ ಅಂಚೆ ಮೂಲಕ ಕಳುಹಿಸಲಾಗಿದೆ. 3- ಮರಳಿ ಬಂದ ಲಕೋಟಿಗಳನ್ನು ಹಾಜರಪಡಿಸಿದ್ದೇನೆ. ಅವುಗಳನ್ನು ಒಟ್ಟಿಗೆ ನಿಸಿ-7 ಎಂದು ಗುರುತಿಸಲಾಯಿತು. ನನ್ನ ನೊಟಿಸಿನಲ್ಲಿ ತಿಳಿಸಿದಂತೆ ದಿಃ 8.11.2019 ರಂದು ದಾವಾ ಆಸ್ತಿಗಳ ಸ್ಥಳಕ್ಕೆ ನಾನು ಹಾಗೂ ನನ್ನ ಸಹಾಯಕ ದಾಖಲೆಗಳೊಂದಿಗೆ ಸ್ಥಳಕ್ಕೆ ಹೋಗಿರುತ್ತೇವೆ.

FDP No.6-13 CW.2

..3.. ಆಗ ಸ್ಥಳದಲ್ಲಿ ವಾದಿ ಸರೋಜಾ ಗೋಪಾಲ ಜೋರಾಪೂರ ಹಾಗೂ 5 ಜನ ಪಂಚರು ಹಾಜರಿದ್ದರು, ನ್ಯಾಯಾಲಯದ ಆದೇಶದಂತೆ ಅಳತೆ ಕೆಲಸ ಪೂರೈಸಿರುತ್ತೇನೆ. ಸರೋಜಾ ಜೋಪಾರಾಪೂರ ರವರ ಜವಾಬು ಬೇಸ್ಮಿ ಪಡೆದಿದ್ದೇನೆ, ಅದನ್ನು ನಿಸಿ-8 ಎಂದು, ಪಂಚಯಾದಸ್ತನ್ನು ನಿಸಿ-9 ಎಂದು ಗುರುತಿಸಲಾಯಿತು. ದಾವಾ 4 ಆಸ್ತಿಗಳ ಕುರಿತು ನಾನು ಪಿ ಟಿ ಶೀಟಿನ ನಕಾಶೆ ಹಾಜರಪಡಿಸಿದ್ದು ಅದನ್ನು ನಿಸಿ-10 ಎಂದು ಗುರುತಿಸಲಾಯಿತು. ಸಿ ಟಿ ಎಸ್ ನಂಃ 2193 ಹಾಗೂ 2194/1 ಎ ಉತ್ತರಕ್ಕೆಃ ರಸ್ತೆ ಇದೆ, ಮತ್ತು ಸಿಟಿ ಎಸ್ ನಂಃ 2194/1 ಎ ಈ ಆಸ್ತಿಯಲ್ಲಿ ಪಶ್ಚಿಮ ಭಾಗದಲ್ಲಿ ದಕ್ಷಿಣದಿಂದ - ಉತ್ತರಕ್ಕೆ ಪ್ಯಾಸೇಜ್ ಇದೆ. ಅದನ್ನು ನಕ್ಷೆಯಲ್ಲಿ ತೋರಿಸಿದ್ದೇನೆ. ಅದೇ ರೀತಿ ಸಿ ಟಿ ಎಸ್ ನಂಃ 1940 ಹಾಗೂ 1939 ರ ಉತ್ತರಕ್ಕೆಃ ಪಶ್ಚಿಮದಿಂದ - ಪೂರ್ವಕ್ಕೆ ಪ್ಯಾಸೇಜ್ ಇದೆ. ಅದೇ ರೀತಿ ಸಿ ಟಿ ಎಸ್ ನಂಃ 1940 ಪಶ್ಚಿಮ ದಿಕ್ಕಿಗೆ ರಸ್ತೆ ಇದೆ.

**ಪಾಟೀ ಸವಾಲು:- ಶ್ರೀ ಎಂ ಎಸ್ ಬಿ ವಕೀಲರಿಂದ ಎದುರುದಾರರ ಪರವಾಗಿ:-**

..4.. ಇದೆ ಪ್ರಕರಣದಲ್ಲಿ ಈ ಮೊದಲು ಆಯುಕ್ತರು ಅಂತಾ ನ್ಯಾಯಾಲಯ ನೇಮಿಸಿತ್ತು ಎಂದರೆ ಸರಿ. ನಾನು ವರದಿ ಸಹ ಸಲ್ಲಿಸಿದ್ದೆ ಎಂದರೆ ಸರಿ. ಅದರಲ್ಲಿ ನನ್ನನ್ನು ಸಾಕ್ಷಿ ಒಳಪಡಿಸಲಾಗಿತ್ತು, ನಾನು ಪಾಟಿ ಸವಾಲು ಸಹ ಎದುರಿಸಿದ್ದೆ ಎಂದರೆ ಸರಿ. ಈ ಮೊದಲಿನ ನನ್ನ ವರದಿ ತಿರಸ್ಕೃತಗೊಂಡು, ಪುನಃ ನನ್ನನ್ನು ಆಯುಕ್ತರು ಅಂತಾ ನೇಮಿಸಲಾಗಿತ್ತು ಎಂದರೆ ಸರಿ.

..5.. ದಿಃ 30.10.2019 ರಂದು ನೋಟಿಸನ್ನು ಈ ದಾವೆಯ ಪಕ್ಷಕಾರರಿಗೆ ಅಂಚೆ ಮೂಲಕ ಕಳಿಸಲಾಗಿದೆ. ನಾನು ತುರ್ತು ಅಂಚೆ ಮೂಲಕ ಕಳಿಸಿಕೊಟ್ಟಿದ್ದೇನೆ. ನಮ್ಮ ಕಚೇರಿಯಲ್ಲಿ ಆವಕ-ಜಾವಕ ವಹಿ ಇಟ್ಟುಕೊಂಡಿದ್ದೇವೆ. ಮರಳಿ ಬಂದ ಲಕೋಟೆಗಳು ಯಾವ ದಿನಾಂಕದಂದು ಬಂದಿವೆ ಅಂತಾ ನಾನು ಇನ್ ವರ್ಡ ರಿಜಿಸ್ಟರನ್ನು ನೋಡಿಲ್ಲ.

FDP No.6-13 CW.2

..6.. ತುರ್ತು ಅಂಚೆ ಮೂಲಕ ಕಳಿಸಿದಂತಹ ನೋಂದಾಯಿತ ದಾಖಲೆಗಳು ಸ್ವೀಕೃತಿ ಪತ್ರ ಮರಳಿ ಬರಲು ಕನಿಷ್ಟ 10-12 ದಿನಗಳ ಬೇಕಾಗುತ್ತವೆ ಎಂಬ ಸಲಹೆಗೆ, ಸಾಕ್ಷಿದಾರ 5-6 ದಿನಗಳು ಬೇಕಾಗುತ್ತವೆಂದು ನುಡಿಯುತ್ತರೆ. ಯಾವ ವಿಳಾಸಕ್ಕೆ ಕಳಿಸಲಾಗಿದಿಯೋ ಅವರು ವಿಳಾಸದಲ್ಲಿ ಲಭ್ಯವಿಲ್ಲದಿದ್ದಲ್ಲಿ ಅಂಚೆ ಇಲಾಖೆಯವರು 7 ದಿನಗಳವರೆಗೆ ಕಾಯ್ದು ಆನಂತರ ಅದನ್ನು ಮರಳಿಕಳಿಸಿಕೊಡುತ್ತಾರೆಂದರೆ ಸರಿ. ವಾಪಸ್ ಬಂದು ತಲುಪಲು ಕನಿಷ್ಟ 3-4 ದಿನಗಳು ಬೇಕಾಗುತ್ತವೆಂದರೆ ಸರಿಯಲ್ಲ, ಸಾಕ್ಷಿದಾರ 1-2 ದಿನಗಳು ಬೇಕಾಗುತ್ತವೆಂದು ನುಡಿಯುತ್ತಾರೆ. ನಾನು ಕೊಟ್ಟಿರುವ ನೋಟಿಸು ಯಾವ ದಿನಾಂಕದಂದು ಈ ಪ್ರಕರಣದ ಅರ್ಜಿದಾರ ಹಾಗೂ ಎದುರುದಾರರಿಗೆ ತಲುಪಿವೆ ಅಂತಾ ನನಗೆ ಹೇಳಲು ಆಗುವುದಿಲ್ಲ. ನಾನು ಕಳಿಸಿದಂತಹ ನೋಟಿಸು ಒಂದನೇ ಎದುರುದಾರರಿಗೆ ಜಾರಿಯಾಗಿದೆ ಅಂತಾ ತೋರಿಸಲು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲವೆಂದರೆ ಸರಿ. ಒಂದನೇ ಎದುರುದಾರರಿಗೆ ನನ್ನ ನೋಟಿಸು ಜಾರಿಯಾಗಿದೆ ಇಲ್ಲವೇ ಅಂತಾ ನಾನು ಖಚಿತಪಡಿಸಿಕೊಂಡಿಲ್ಲವೆಂದರೆ ಸರಿ. ಒಂದನೇ ಎದುರುದಾರರಿಗೆ ಅವರ ವಿಳಾಸಕ್ಕೆ ನಾನು ನೋಟಿಸು ಕಳಿಸಿಲ್ಲವೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅರ್ಜಿಯಲ್ಲಿ ತೋರಿಸಿದಂತಹ ವಿಳಾಸಕ್ಕೆ ಕಳಿಸಿರುತ್ತೇನೆ.

**ಈ ಹಂತದಲ್ಲಿ ಕೋರಿಕೆಯ ಮೇರೆಗೆ ಪಾಟಿ ಸವಾಲಿಗಾಗಿ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸ. ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಹುಬ್ಬಳ್ಳಿ.